## ಕರ್ನಾಟಕ ರಾಜ್ಯದಲ್ಲಿ ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಹುದ್ದೆಗಳ ಭರ್ತಿ

418 (4437) ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ (ಬೆಳ್ಳಾವಿ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಬೆರಳಚ್ಚುಗಾರರು ಮತ್ತು ಶೀಘ್ರಲಿಪಿಗಾರರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಸರ್ಕಾರ ಸದರಿ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮವೇನು?

ಆ) ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಎಷ್ಟು ಹುದ್ದೆಗಳು ಖಾಲಿ ಇವೆ (ಇಲಾಖಾವಾರು ವಿವರ ನೀಡುವುದು) ಹಾಗೂ ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಹುದ್ದೆವಾರು ವಿವರ ನೀಡುವುದು.

ಇ) ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಭರ್ತಿ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವಾಗ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಬಹುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು

ಆ) ಮತ್ತು ಇ) ವಿಭಾಗ ಮಟ್ಟದ ಕಛೇರಿಗಳನ್ನು ರದ್ದುಗೊಳಿಸುವುದು, ಶೇಕಡಾ 80 ರಷ್ಟು ಖಾಲಿ ಹುದ್ದೆಗಳನ್ನು ರದ್ದುಗೊಳಿಸುವುದು, ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸುಗಳ ಪ್ರಕಾರ ಇಲಾಖೆಗಳ ಪುನಸ್ಸಂಘಟನೆ – ಈ ಎಲ್ಲ ಕಾರಣಗಳಿಂದ ಅನೇಕ ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಹುದ್ದೆಗಳು ರದ್ದಾಗುತ್ತಿವೆ. ಆದಕಾರಣ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ಸ್ಪಷ್ಟ ಚಿತ್ರಣ ಸದ್ಯದಲ್ಲಿ ಸಿಗುವುದಿಲ್ಲ. ಈ ಪ್ರಕ್ರಿಯೆಗಳು ಎಲ್ಲ ಇಲಾಖೆಗಳಿಗೆ ಸಂಬಂಧಿಸಿದಂತೆ ಇನ್ನೂ ಪೂರ್ಣವಾಗಿಲ್ಲ. ಈ ಪ್ರಕ್ರಿಯೆ ಪೂರ್ಣವಾದ ನಂತರ ಇಲಾಖೆಗಳು ಖಾಲಿ ಹುದ್ದೆಗಳನ್ನು ತುಂಬಲು ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಆಯ್ಕೆ ಪ್ರಾಧಿಕಾರಕ್ಕೆ ಸೂಕ್ತ ಪ್ರಸ್ತಾವನೆಯನ್ನು ಕಳುಹಿಸುತ್ತವೆ. ಸದರಿ ಪ್ರಾಧಿಕಾರವು ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತದೆ.

**ಶ್ರೀ ಕ್ಯಾತಸಂದ್ರ ಎನ್.ರಾಜಣ್ಣ** : ಮಾನ್ಯ ಅಧ್ಯಕ್ಷರೆ, ಉತ್ತರ ಇದೆ. ಆದರೆ ನನ್ನದು ಪ್ರಶ್ನೆ ಎಷ್ಟು ಹುದ್ದೆಗಳು ಖಾಲಿ ಇವೆ ಎನ್ನತಕ್ಕಂಥಾದ್ದು ಒಂದು. ಎಷ್ಟು ಕಾಲದಿಂದ ಖಾಲಿ ಇವೆ, ಎಷ್ಟು ಸಮಯದಲ್ಲಿ ತುಂಬುತ್ತೀರಿ ಎನ್ನತಕ್ಕಂಥಾದ್ದು ಈ ಮೂರು ಸಣ್ಣ ವಿಚಾರಕ್ಕೆ ಉತ್ತರ ಕೊಟ್ಟರೆ ಸಾಕು.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** :- ಮಾನ್ಯ ಅಧ್ಯಕ್ಷರೇ, 66 ಹುದ್ದೆಗಳು ಖಾಲಿ ಇವೆ. ಈಗಾಗಲೇ ಅದನ್ನು ತುಂಬತಕ್ಕಂಥ ಪ್ರಯತ್ನ ಕೂಡ ನಡೆಯುತ್ತಿದೆ. ಮತ್ತೆ ಸಿ ಅಂಡ್ ಆರ್ ರೂಲ್ಸ್ ಪ್ರಕಾರ ಖಾಲಿ ಹುದ್ದೆಗಳನ್ನು ನೋಟಿಫೈ ಮಾಡಿ ಭರ್ತಿ ಮಾಡಿ ತೆಗೆದುಕೊಳ್ಳಲಾಗಿದೆ.

**ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ** : ಮಾನ್ಯ ಅಧ್ಯಕ್ಷರೆ, ನಾನು ಎಷ್ಟು ಸಮಯದಲ್ಲಿ ತುಂಬಲಿಕ್ಕೆ ಸಾಧ್ಯವಾಗುತ್ತದೆಂದು ನಿರ್ದಿಷ್ಟವಾಗಿ ಕೇಳಿದೆ. ಆದರೆ ಇಲ್ಲಿ ಉತ್ತರದಲ್ಲಿರತಕ್ಕಂಥಾದ್ದು ಇನ್ನೂ ನಾವು ರೀ ಸ್ಟ್ರಕ್ಚರಿಂಗ್ ಮಾಡುತ್ತಿದ್ದೇವೆ. ಆ ರಿ ಸ್ಟ್ರಕ್ಚರಿಂಗ್ ಎಲ್ಲಾ ಆದ ನಂತರ ತುಂಬುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆ ರೀ ಸ್ಟ್ರಕ್ಚರಿಂಗ್ ಮಾಡಿ ತುಂಬಲಿಕ್ಕೆ ಎಷ್ಟು ಸಮಯ ತೆಗೆದುಕೊಳ್ಳುತ್ತದೆ ಎನ್ನುವ ಪ್ರಶ್ನೆ ಅಷ್ಟೇ.

**ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)** : ನಾವು ಈಗಾಗಲೇ ಆದೇಶ ಕೊಟ್ಟಿದ್ದೇವೆ ಎಷ್ಟು ಖಾಲಿ ಹುದ್ದೆಗಳು ಇವೆ ಅವುಗಳನ್ನು ಭರ್ತಿ ಮಾಡಲಿಕ್ಕೆ ಕೆಲಸ ನಡೆಯುತ್ತಿದ್ದು 2003-04 ರಲ್ಲಿ ಬಜೆಟ್ ಭಾಷಣದಲ್ಲಿ ಹುದ್ದೆಗಳು ಕಡಿಮೆ ಮಾಡಬೇಕೆಂದು ಆಗಿದೆ. ಆದರೂ ಕೂಡ ಅವೆಲ್ಲಾ ಸಾಮಾನ್ಯ ಹುದ್ದೆಗಳು ಬೇಕಾಗುತ್ತದೆ. ಅದಕ್ಕೆ 66 ಹುದ್ದೆಗಳಿಗೆ ಭರ್ತಿ ಮಾಡತಕ್ಕಂಥ ಕೆಲಸ ಈಗಾಗಲೇ ಶುರುವಾಗಿದೆ.

**ಕಲಘಟಗಿ ವಿಧಾನಸಭಾ ಕ್ಷೇತ್ರದಲ್ಲಿ ಮೀನುಗಾರಿಕಾ ಇಲಾಖೆಗೆ ಸ್ವಂತ ಕಟ್ಟಡ ಒದಗಿಸುವುದು**

419 (5344) ಶ್ರೀ ಚಿಕ್ಕನಗೌಡರ ಸಿದ್ದನಗೌಡರ ಈಶ್ವರಗೌಡ (ಕಲಘಟಗಿ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಇರುವ ಮೀನುಗಾರಿಕೆ ಇಲಾಖೆಯು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?